MYSORE LEGISLATIVE ASSEMBLY

FORTIETH DAY

Wednesday, 13th April 1955.

The House met in the Assembly Hall, Old Public Offices, Bangalore, at Twelve of the clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS.

Misappropriations in Municipalities.

Q.—208. Sri T. HANUMIAH (Hiriyur—Scheduled Castes).—

Will the Government be pleased to state :—

(*a*) the names of the Municipalities if any in which misappropriation has taken place from the year 1952-53 to 1954-55 with names ;

(*b*) if so, the extent of misappropriations in each municipality with names and the persons responsible for this ;

(*c*) whether any municipal authorities sought instructions of Government in the matter of taking action (with names) ;

(*d*) the action taken by the Government ?

A.—Sri T. CHANNIAH (Minister for Public Health and Local Self-Government).—

(*a*) and (*b*) Please see Statement appended.

(*c*) The Commissioner, Corporation of the City of Bangalore and the Municipal Commissioner, Mysore City Municipality, have brought to the notice of Government the cases of misappropriation in the Corporation of the City of Bangalore and the Mysore City Municipality respectively.

(*d*) Please see Statement appended.

V-931'N 55
NSS-12-26-51
[80) 47821

(SRI T. CHANNIAH.)

STATEMENT

Serial No.	The names of Municipalities in which misappropriation has taken place from the year 1952-53 and 1954-55	Extent of misappropriation	The name and designation of the person responsible for the misappropriation	Action taken
1	2	3	4	5
I.	Corporation of the City of Bangalore—			
	Date of misappropriation—	Rs. a. p.	Sriyuths—	
	(a) 15th October 1953 ...	706 10 6	M. Ramiah, Bill Collector, Excess Water Section.	The full amount has been recovered and the official's services terminated.
	(b) 19th November 1953 ...	113 8 3	G. Janardhana Rao, Bill Collector, Excess Water Section.	The full amount has been recovered and the official removed from service.
	(c) 17th February 1953 ...	525 3 0	M. K. Ramaswamy, Bill Collector, Property Tax Section.	Do do
	(d) 6th December 1952 ...	706 1 4	B. D. Narasimhiah Chetty, Bill Collector, Property Tax Section.	The full amount has been recovered and complaint made to the Police.
	(e) 24th May 1953 ...	182 9 0	K. L. Jayashankar, Pound Keeper, City Cattle Pound.	The full amount recovered.
	(f) 30th October 1952 ...	4,405 1 1	P. Y. Shivappa, Mutsaddy, Octroi Office.	Full amount recovered and the case is proceeding.
	(g) 13th September 1953 ...	285 2 0	T. S. Suryanarayanachar, Market Bill Collector.	The official has been arrested and the result of the case is awaited.
	(h) 16th March 1954 ...	605 5 5	H. S. Narayana Reddy, Market Bill Collector.	The amount has been recovered and complaint lodged.
	(i) 15th February 1954 ...	532 5 0	M. V. Oriff, Market Bill Collector.	A complaint has been made to the Police. The Bill Collector is absconding. The Police are investigating the case.

	(j) *1951–52 to 1953–54* ...	2,552	7	1	Kuppuswamy, Tax Inspector, Property Tax Section.	The Tax Inspector is kept under suspension pending enquiry. The matter is still under detailed enquiry and investigation by the Assistant Revenue Officer, East, and his report is awaited.
	(k) 1953–54 ...	226	14	11	M. H. Khader, Bill Collector, Property Tax Section.	The Bill Collector is kept under suspension. The full amount has been recovered. A complaint has been made to the Police. The result of the case is awaited.
	(l) 1953–54 ...	67	3	6	M. S. Khan, Bill Collector, Property Tax Section.	Do do
	(m) 30th October 1954 ...	5,097	7	7	T. V. Sankaranarayana, Bill Collector, Property Tax Section.	He has been arrested and released on bail. The case is proceeding in the Court. The Auditor has been requested to audit his accounts and the audit report is awaited.
	(n) 29th November 1954 ...	426	4	6	B. Hanumanthe Gowda, Bill Collector, Property Tax Section.	The full amount has been recovered. Complaint has been made to the Police. The result of the case is awaited.
II.	Mysore City Municipality—					
	(a) ...	1,276	7	9	M. Lakshmansingh, Revenue Inspector.	The official was reduced as Bill Collector on Rs. 30 per mensem.
	(b) ...	565	10	2	H. Srinivasaiya, Bill Collector.	The official was reduced from Rs. 40 to Rs. 35 per mensem.
	(c) ...	655	1	10	C. Krishnappa, Bill Collector.	The official was reduced from Rs. 38 to Rs. 33 per mensem.
	(d) ...	766	0	7	K. Kalaiya ...	Do do
	(e) ...	115	11	9	Adinarayanasingh ...	The official was dismissed and action is being taken to adjust the amount from out of his security deposit amount.

(SRI T. CHANNIAH.)

Serial No.	The names of Municipalities in which misappropriation has taken place from the year 1952-53 and 1954-55.	Extent of misappropriation.	The name and designation of the person responsible for the misappropriation.	Action taken
1	2	3	4	5
III.	Town Municipalities—	Rs. a. p.	Sriyuths—	
	1 Ramanagaram—(a) ...	155 3 0	R. Mahadeviah, Clerk ...	The amount was recovered and he was transferred.
	(b) ...	87 8 0	Narayanappa, Octroi Manegar.	The amount was recovered and he was dismissed from service.
	2 Hunsur ...	60 0 0	Clerk ...	The amount was recovered and the official was fined Rs. 10 and transferred.
	3 Mugur ...	2,087 4 9	Easwariah, Ex-President.	Action is taken as per Section 192 (2) of the Mysore Town Municipalities Act, 1951, to surcharge the person.
	4 Yelandur ...	300 0 0	Clerk	The official was dismissed.
	5 Nanjangud ...	254 2 9	Clerk	The amount was recovered.
	6 Mulbagal (a) ...	752 7 3	Vasanthappa, Bill Collector.	The amount was recovered and the official was acquitted after trial in the court.
	(b) ...	156 4 0	N. G. Pattabhiramiah, Municipal Clerk.	The amount was recovered and he was reverted as Third Division Clerk for one year.
	7 Manchenahalli ...	128 12 3	Abdul Jabbar, Bill Collector.	He was prosecuted and subsequently the case was withdrawn and action will be taken to adjust the amount out of the pay and allowances of Rs. 144-6-8 due to the official.

8	Tumkur	(a)	...	90 0 0	B. S. Gangappa, Cash Clerk and K. R. Vasudeva Rao.	B. S. Gangappa was dismissed and later on reinstated on his representation and his next three increments were stopped. The promotion of Sri K. R. Vasudeva Rao was stopped for two years.
		(b)	...	48 8 0	C. V. Narasimhalu, Market Sergeant.	The amount was recovered and the official has been placed under suspension.
		(c)	...	Amount not yet been determined.	H. B. Thammiah.	Ordered to be prosecuted.
9	Sira		...	1,473 12 9	C. R. Basavaraju, Bill Collector.	The official has been prosecuted and also action has been taken to recover the amount from the Clerks, Executive Officers, Presidents and Vice-Presidents who had neglected to check the receipt and remittance of money.
10	Arsikere		...	Amount not yet determined.	K. T. Suryanarayanappa, Bill Collector.	The Controller, State Accounts Department, has been requested to arrange for special audit of the mohatarfa accounts and further particulars have been called for.
11	Chitaldrug	(a)	...	5,088 5 6	Hanumanthappa, Bill Collector.	Criminal prosecution had been launched in the First Magistrate's Court at Chitaldrug and the accused were acquitted and action is taken to fix up responsibility on the persons concerned.
		(b)	...	23,810 2 7	Krishnappa ...	

Serial No.	The names of Municipalities in which misappropriation has taken place from the year 1952-53 and 1954-55	Extent of misappropriation	The name and designation of the person responsible for the misappropriation	Action taken
1	2	3	4	5
III.	Town Municipalities—(*concld.*)	Rs. a. p.	Sriyuths --	
12	Harihar—(a) ...	49 8 0	V. B. Kanniah, Ex-Municipal Revenue Inspector.	A sum of Rs. 49-8-0 has been fully recovered from Sri V. B. Kanniah, Ex-Municipal Revenue Inspector.
	(b) ...	828 6 6	A. N. Anantharamiah, Municipal Clerk.	
	(c) ...	451 0 0	K. M. Siddappa, Clerk ...	Action has been taken to recover the amounts from others.
	(d) ...	6 7 0	A. Shivalingiah, Bill Collector.	
	(e) ...	18 0 0	V. P. Pias, Bill Collector ...	
	Total ...	1,353 5 6		
13	Challakere ...	19 14 0	N. R. Veerabhadrachar, Bill Collector.	The amount has been recovered
14	Hiriyur ...	5,400 0 0	M. S. Avadhani, Ex-Municipal President.	Sri M. S. Avadhani has drawn Rs. 5,400 as advance and the same has not been accounted for by him and the matter is being examined.
15	Shimoga ...	717 6 0	M. Channiah, Bill Collector ...	The amount has been recovered. Audit of accounts pertaining to this case has been arranged and pending disposal of the case the official has been kept under suspension and handed over to the Police for further action.

16	Shiralakoppa	...	75	0	0	Agadi Krishnamoorthi, Ex-President.	The amount was remitted to the Treasury.
17	Nyamathi	...	4,184	13	0	Y. Shivayogappa, Bill Collector	A sum of Rs. 1,400 has been recovered from the official and he has been kept under suspension snd a case has been launched against him and the same is pending before the Court.
18	Thirthahalli	...	1,129	11	9	Srinivasa Padiyar, Bill Collector.	A criminal case has been launched against the official in the Special First Class Magistrate's Court, Shimoga, and the case is under trial.
19	Sagar	...	15	0	0	D. Bangarappa, Patel of the Municipality.	The amount was recovered and he was administered a severe warning.
20	Tarikere	...	210	12	0	S. Mahabaliah, Head Clerk ...	The official has been prosecuted and the case is under trial in the Court of the Munsiff-Magistrate, Narasimharaja-pura.
21	Bellary- (i)	...	234	9	6	Virupakshappa, Bill Collector	Statutory instructions issued by the Government of Madras are followed and action taken accordingly.
	(ii)	...	66	8	0	B. Hussain Khan, Bill Collector.	
	(iii)	...	152	8	3	Mohamed Sarvar, Bill Collector.	
	(iv)	...	417	15	6	Gundappa. Bill Collector ...	
	(v)	...	1,100	0	0	M. A. Rashid, Clerk ...	
22	Hospet	...	1,300	0	0	D. Vasudeva Rao, Clerk and M. Hanumanthu, Bill Collector.	Sri D. Vasudeva Rao was dismissed from service and Sri Hanumanthu is absconding and a case is pending with the Police.

ಶ್ರೀ ಟಿ. ಹನುಮಯ್ಯ.—ಮುನಿಸಿಪಲ್ ಆಫೀಸುಗಳಲ್ಲಿ ಇಷ್ಟು ಅವ್ಯವಸ್ಥೆಯಾಗುವುದಕ್ಕೆ ಆಡಿಟ್ ಮಾಡದಿರುವುದೇ ಕಾರಣವಲ್ಲವೇ ?

ಶ್ರೀ ಟಿ. ಚನ್ನಯ್ಯ.—ಅದೂ ಒಂದು ಕಾರಣವೆಂದು ಹೇಳಬಹುದು.

ಶ್ರೀ ಟಿ. ಹನುಮಯ್ಯ.—ಎಷ್ಟು ವರ್ಷಕ್ಕೊಂದು ಸಲ ಮುನಿಸಿಪಲ್ ಆಫೀಸುಗಳಲ್ಲಿ ಆಡಿಟ್ ಮಾಡುವುದು?

ಶ್ರೀ ಟಿ. ಚನ್ನಯ್ಯ.—ಪ್ರತಿವರ್ಷವೂ ಮಾಡಬೇಕೆಂಬುದೇ ಸರ್ಕಾರದ ಉದ್ದೇಶ. ಅದೇರೀತಿ ಅಕೌಂಟ್ಸ್ ಇಲಾಖೆಗೆ ಸೂಚನೆ ಕೊಟ್ಟಿದೆ. ಅದೇ ಪ್ರಕಾರ ಈಗ ಸಾಮಾನ್ಯವಾಗಿ ಒಂದು ಸಲಕ್ಕೆ ಎರಡು ವರ್ಷಗಳ ಅಕೌಂಟನ್ನು ಆಡಿಟ್ ಮಾಡುತ್ತಾರೆ.

ಶ್ರೀ ಟಿ. ಹನುಮಯ್ಯ.—ಐದಾರು ವರ್ಷಗಳ ಲೆಕ್ಕಗಳು ಕೂಡ ಮ್ಯುನಿಸಿಪಲ್ ಆಫೀಸುಗಳಲ್ಲಿ ಆಡಿಟ್ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಹಿಂದೆ ಆಡಿಟ್ ಸಿಬ್ಬಂದಿ ಬಹಳ ಕಡಮೆಯಿತ್ತು. ಈಗ ಅದನ್ನು ಹೆಚ್ಚಿಸಿ ಜಾಗ್ರತೆ ಆಡಿಟ್ ಮಾಡಿ ಅಪ್ ಟು ಡೇಟ್ ಮಾಡಬೇಕೆಂದು ಕಂಟ್ರೋಲರಿಗೆ ತಿಳಿಸಿದೆ. ಅದೇ ಪ್ರಕಾರ ಜಾಗ್ರತೆ ಮಾಡಲು ಪ್ರೋಗ್ರಾಂ ಹಾಕಿ ಮಾಡುತ್ತಿದ್ದಾರೆ.

ಶ್ರೀ ಟಿ. ಹನುಮಯ್ಯ.—ಮಿಸ್‌ಅಪ್ರೊಪ್ರಿಯೇಟ್ ಮಾಡಿದರೆ ಸಂಬಂಧಪಟ್ಟ ಅಧಿಕಾರಿಗಳ ಆಸ್ತಿಯನ್ನು ತಕ್ಷಣವೇ ತೆಗೆದುಕೊಳ್ಳುತ್ತೀರೋ ಅಥವಾ 5-10 ವರ್ಷಗಳವರೆಗೆ ಮುಂದುವರೆಸುತ್ತೀರೋ?

ಶ್ರೀ ಟಿ. ಚನ್ನಯ್ಯ.—ಮಿಸ್ ಅಪ್ರೊಪ್ರಿಯೇಟ್ ಮಾಡಿದ ಹಣವನ್ನು ಕಾನೂನು ಪ್ರಕಾರ ವಸೂಲು ಮಾಡಲಾಗುತ್ತದೆ.

ಶ್ರೀ ಟಿ. ಹನುಮಯ್ಯ.—ತಾವೇ ವಸೂಲು ಮಾಡುತ್ತೀರೋ ಅಥವಾ ಕೋರ್ಟುಗಳಲ್ಲಿ ಕೇಸುಹಾಕುತ್ತೀರೋ ?

ಶ್ರೀ ಟಿ. ಚನ್ನಯ್ಯ.—ಕೇಸು ಹಾಕಿದಾಗ ಕೋರ್ಟುಗಳಲ್ಲಿ ತೀರ್ಮಾನವಾದಮೇಲೆ ತಕ್ಕ ಶಿಕ್ಷೆ ವಿಧಿಸಲ್ಪಡುತ್ತದೆ. ಬಾಕಿ ಸಂದರ್ಭಗಳಲ್ಲಿ ಇಲಾಖೆಯವರೇ ಹಣ ವಸೂಲು ಮಾಡಲು ಸೂಕ್ತ ಕ್ರಮ ಕೈಕೊಂಡು ಕಾನೂನು ಪ್ರಕಾರ ಶಿಕ್ಷೆ ಮಾಡುತ್ತಾರೆ.

ಶ್ರೀ ಟಿ. ಹನುಮಯ್ಯ.—ನ್ಯಳೀಯ ಸಂಸ್ಥೆಗಳ ವಿಚಾರದಲ್ಲಿ ಹೆಚ್ಚು ನಿಗಾ ಇಲ್ಲದಿರುವುದರಿಂದ ಇಷ್ಟು ಹಣ ದುರ್ವಿನಿಯೋಗವಾಗಲು ಕಾರಣವಾಗಿ ಅವ್ಯವಸ್ಥೆಯಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಕೆಲವು ಸಂದರ್ಭಗಳಲ್ಲಿ ಆ ರೀತಿ ಆಗುತ್ತದೆ. ಈಗಾಗಲೇ ಪರಿಶೀಲಿಸಿ ಆಡಿಟ್ ಮಾಡಿ ತಪ್ಪಿತಸ್ಥರಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಹಣ ತಿಂದು ಹಾಕುವ ಬಿಲ್ ಕಲೆಕ್ಟರುಗಳನ್ನು ಎಗ್ಜಿಕ್ಯುಟಿವ್ ಆಫೀಸರು ಚೆಕ್ ಮಾಡುವುದಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಮಾಡಬೇಕೆಂದು ಕಾನೂನಿದೆ. ಕೆಲವು ಸಂದರ್ಭಗಳಲ್ಲಿ ಅವರು ಹಾಗೆ ಮಾಡುವುದಿಲ್ಲ. ಆಗ ಈ ರೀತಿ ಆಗುತ್ತವೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಹಾಗಾದರೆ ಎಗ್ಜಿಕ್ಯುಟಿವ್ ಆಫೀಸರಿಗೆ ಕೊಟ್ಟಿರುವ ಕೆಲಸವೇನು ?

ಶ್ರೀ ಟಿ. ಚನ್ನಯ್ಯ.—ಅದೆಲ್ಲಾ ಆಕ್ಟಿನಲ್ಲೇ ಇದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಈಗ ಅಸೈನ್ ಮಾಡಿರುವ ರೀತಿಯಲ್ಲಿ ಬಿಲ್ ಕಲೆಕ್ಟರು ವಸೂಲು ಮಾಡಿದ ಹಣವನ್ನು ಟ್ರೆಜರಿಗೆ ಜಮಾ ಮಾಡಿದರೇ ಇಲ್ಲವೆ ಎಂಬುದನ್ನು ಚೆಕ್ ಮಾಡುವುದು ಅವರ ಕೆಲಸ ವಲ್ಲವೇ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಬಿ. ಎಕ್. ಬೋರಣ್ಣಗೌಡ.—ಹಾಗಿರುವಾಗ ಬಿಲ್ ಕಲೆಕ್ಟರು ತಂದ ಹಣ ದುರುಪಯೋಗ ಮಾಡಿದನೇ ಅಥವಾ ಜಮಾ ಮಾಡಿದನೇ, ಇಲ್ಲವೆ ಎಂಬುದನ್ನು ಪ್ರೆಸಿಡೆಂಟರ ಗಮನಕ್ಕೆ ತರುವುದಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ತರುತ್ತಾರೆ. ಕೆಲವು ಸಂದರ್ಭಗಳಲ್ಲಿ ವಾರಕ್ಕೆ ಒಂದೆರಡು ಸಲ ಪ್ರೆಸಿಡೆಂಟರು ನೋಡುತ್ತಾರೆ. ಹೆಚ್ಚಾಗಿ ಚೀಫ್ ಆಫೀಸರೆ ಅಂಥ ಪ್ರೊಸೀಜರರ್ ಮ್ಯಾಟರ್ಸ್ ನೋಡುವುದು.

ಶ್ರೀ ಬಿ. ಎಕ್. ಬೋರಣ್ಣಗೌಡ.—ಬಿಲ್ ಕಲೆಕ್ಟರ ಮೇಲೆ ಅಪಾದನೆ ಬಂದಿದೆ. ಆದರೆ ಆತ ಹಣಕೊಟ್ಟಿದು ಕೊಂಡು ಹೋಗಿ ಪ್ರೆಸಿಡೆಂಟರಿಗೆ ಅಥವಾ ಚೀಫ್ ಆಫೀಸರಿಗೆ ಕೊಟ್ಟಮೇಲೆ ಅಲ್ಲವೆ ಇಷ್ಟೆಲ್ಲಾ ದುರುಪಯೋಗವಾಗಿರುವುದು ?

ಶ್ರೀ ಟಿ. ಚನ್ನಯ್ಯ.—ನೇರವಾಗಿ ಚೀಫ್ ಆಫೀಸರೇ ಮಿಸ್ ಅಪ್ರೊಪ್ರಿಯೇಟ್ ಮಾಡಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಸಾಮಾನ್ಯವಾಗಿ ಬಿಲ್ ಕಲೆಕ್ಟರು ಹಣ ವಸೂಲು ಮಾಡಿದ ತಕ್ಷಣ ಆಫೀಸರ ಸೈನು ಪಡೆದು ಜಮಾ ಮಾಡಬೇಕು.

ಶ್ರೀ ಬಿ. ಎಕ್. ಬೋರಣ್ಣಗೌಡ.—ಕೆಲವು ಸಂದರ್ಭಗಳಲ್ಲಿ ಪ್ರೆಸಿಡೆಂಟ್ ಮತ್ತು ಚೀಫ್ ಆಫೀಸರ ಮೇಲೆ ದೂರಿರುವುದರಿಂದ ನೀವು ಆ ಕಡೆ ಹೋದಾಗ ವಿಚಾರ ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಎಲ್ಲ ಸಾಧ್ಯವೋ ಅಲ್ಲ ಕೇಳಿದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಹಾಗಾದರೆ ಯಾವಯಾವ ಮುನಿಸಿಪಾಲಟಿಗಳಲ್ಲಿ ಕೇಳಿದ್ದಿರೀ ?

ಶ್ರೀ ಟಿ. ಚನ್ನಯ್ಯ.—ಸಾಮಾನ್ಯವಾಗಿ ಇದೊಂದೇ ಅಲ್ಲ, ಅನೇಕ ವಿಷಯಗಳಲ್ಲಿ ದೂರು ಬಂದಿರುವುದನ್ನು ವಿಚಾರಿಸುತ್ತೇವೆ. ಒಂದೊಂದು ಸಲ ನಮ್ಮ ಗಮನಕ್ಕೆ ಕೆಲವು ಬಾರದೆ ಹೋಗಬಹುದು. ಮುಖ್ಯವಾಗಿ ಗಮನಕ್ಕೆ ಬಂದ ವಿಚಾರಗಳಲ್ಲಿ ಕಾನೂನು ಪ್ರಕಾರ ತಪ್ಪಿತಸ್ಥರ ಮೇಲೆ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದೆ. ಕೆಲವು ವೇಳೆ ಇಲಾಖಾ ಡೆಪ್ಯುಟಿ ಕಮಿಷನರು ಕ್ರಮ ತೆಗೆದುಕೊಂಡಿದ್ದಾರೆ. ನೇರವಾಗಿ ನಾವೇ ಎಲ್ಲಾ ವಿಷಯಗಳನ್ನೂ ತನಿಖೆ ಮಾಡುವುದು ಸ್ವಲ್ಪ ಕಷ್ಟ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಬಿಲ್ ಕಲೆಕ್ಟರು ಹಣ ತಿಂದಿರುವ ಸಂದರ್ಭಗಳಲ್ಲಿ ಅಂಟಿಕರಪ್ಷನ್ ಇಲಾಖೆಗೆ ತಿಳಿಸಿದ್ದೀರೋ ಅಥವಾ ಚೀಫ್ ಆಫೀಸರು ಅಥವಾ ಪ್ರೆಸಿಡೆಂಟರು ವಾರ್ನಿಂಗ್ ಕೊಟ್ಟು ಇಲ್ಲವೇ 5 ರೂಪಾಯಿ ರಿಡಕ್ಷನ್ ಮಾಡಿ ತಾವೇ ಕ್ರಮ ಕೈಕೊಂಡಿದ್ದಾರೋ ?

ಶ್ರೀ ಟಿ. ಚನ್ನಯ್ಯ.—ಮಿಸ್ ಅಪ್ರೊಪ್ರಿಯೇಷನ್ ಹೆಚ್ಚಾಗಿರುವಾಗ ಮೇಲ್ಪಟ್ಟ ಆಫೀಸರುಗಳು ಮತ್ತು ಡೆಪ್ಯುಟಿ ಕಮಿಷನರು ಸರ್ಕಾರಕ್ಕೆ ತಿಳಿಸಿ ಅಂಟಿಕರಪ್ಷನ್ ಆಫೀಸರಿಗೆ ತಿಳಿಸಬೇಕು. ನಮಗೆ ತಿಳಿದು ಬಂದಾಗ ನಾವೇ ರೆಫೆರ್ ಮಾಡಿ ಕೇಸ್ ಇನ್‌ವೆಸ್ಟಿಗೇಟ್ ಮಾಡಿ ಸೂಕ್ತ ಕ್ರಮ ತೆಗೆದುಗೊಳ್ಳಲಾಗಿದೆ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಎಷ್ಟು ಹಣ ಮಿಸ್‌ಅಪ್ರೊಪ್ರಿಯೇಟಾಗಿದ್ದರೆ ಲಂಚ ನಿರೋಧ ಇಲಾಖೆಗೆ ತಿಳಿಸಬೇಕೆಂದು ಗೊತ್ತು ಮಾಡಿದೆ ?

ಶ್ರೀ ಟಿ. ಚನ್ನಯ್ಯ.—ಹಾಗೇನೂ ನಿಗದಿ ಮಾಡಿಲ್ಲ.

ಶ್ರೀ ಬಿ. ಎಕ್. ಬೋರಣ್ಣಗೌಡ.—ಈಗ ಉತ್ತರ ಕೊಟ್ಟಿರುವ ಪ್ರಕಾರ ಲಂಚನಿರೋಧ ಇಲಾಖೆಗೆ ತಿಳಿ

ಸದೆ 5 ರೂಪಾಯಿ, 30 ರೂಪಾಯಿ ಹೀಗೆ ಸಂಬಂಧಪಟ್ಟ ಇಲಾಖೆಯವರೇ ರಿಡಕ್ಷನ್ ಮಾಡಿರುವುದಕ್ಕೆ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಅಷ್ಟು ಸೀರಿಯಸ್ ಇರ್ರೆಗ್ಯುಲ್ಯಾರಿಟಿಯಲ್ಲುವೆಂದು ಕಂಡುಬಂದಾಗ ಇಲಾಖೆಯ ಶಿಪಾರ್ಸಿನಮೇಲೆ ಒಂದು ರಿಯಾಯಿತಿ ತೋರಿಸುವುದು ಅಥವಾ ಶಿಕ್ಷೆ ಮಾಡುವುದು ಇಂಥ ಕ್ರಮ ಕೈಕೊಳ್ಳಲಾಗಿದೆ.

ಶ್ರೀ ಬಿ. ಎಚ್. ಬೋರಣ್ಣಗೌಡ.—ಹೀಗೆ ಹಣ ತಿಂದಿರುವುದು ಇರ್ರೆಗ್ಯುಲ್ಯಾರಿಟಿಯಲ್ಲವೆಂದು ಹೇಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಒಂದು ರೂಪಾಯಿ ತಿಂದು ಹಾಕಿದರೂ ಅದು ಇರ್ರೆಗ್ಯುಲ್ಯಾರಿಟಿ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಬಿಲ್‌ಕಲೆಕ್ಟರುಗಳು ಬೆಳಿಗ್ಗೆ ವಸೂಲು ಮಾಡುವ ಹಣವನ್ನು ಸಾಯಂಕಾಲ ಅಥವಾ ಮಾರನೆಯ ದಿನ ಮುನಿಸಿಪಲ್ ಆಫೀಸಿಗೆ ಜಮಾ ಮಾಡುವುದಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಟ್ರೆಜರಿಗಳಿಗೆ ಜಮಾ ಮಾಡಬೇಕು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಎಷ್ಟು ವಸೂಲಾಗಿದೆಯೆಂಬುದನ್ನು ಪ್ರೆಸಿಡೆಂಟ್ ಅಥವಾ ಚೀಫ್ ಆಫೀಸರು ನೋಡುವುದಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಕಾನೂನು ಪ್ರಕಾರ ನೋಡಬೇಕು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈಗ ಮುನಿಸಿಪಾಲಿಟಿಗಳಲ್ಲಾಗಿರುವ ದುರುಪಯೋಗದಲ್ಲಿ ಕೆಲವು ಕಡೆ ಪ್ರೆಸಿಡೆಂಟರು ಸೇರಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಕೆಲವು ಸ್ಥಳಗಳಲ್ಲಿ ಆ ರೀತಿ ಆಗಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕೆಲವು ಕಡೆ ಬಿಲ್ ಕಲೆಕ್ಟರುಗಳು 5-6 ಸಾವಿರ ರೂಪಾಯಿಗಳಷ್ಟು ಹಣ ತಿಂದು ಹಾಕಿಕ್ಕಾರೆ. ಅವರಿಗೆ ಒಂದು ಎಕರೆ ಜಮೀನಾಗಲಿ, ಬೇರೆ ಆಸ್ತಿಯಾಗಲಿ ಇಲ್ಲ. ಅಂಥ ಸಂದರ್ಭಗಳಲ್ಲಿ ಅವರಿಂದ ವಸೂಲು ಮಾಡುವುದು ಹೇಗೆ ?

ಶ್ರೀ ಟಿ. ಚನ್ನಯ್ಯ.—ಸಾಧ್ಯವಾದರೆ ವಸೂಲು ಮಾಡುತ್ತಾರೆ. ಇಲ್ಲದಿದ್ದರೆ ಕಾನೂನು ಪ್ರಕಾರ ಎಷ್ಟು ಶಿಕ್ಷೆ ವಿಧಿಸಬಹುದೋ ಅಷ್ಟನ್ನು ವಿಧಿಸುತ್ತಾರೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ನೌಕರಿ ಕೊಡಬೇಕಾದರೆ ನೌಕರನಿಂದ ಷೂರಿಟಿ ತೆಗೆದುಕೊಂಡಿರುತ್ತೀರಾ ? ಹಾಗೆ ತೆಗೆದುಕೊಳ್ಳದಿದ್ದರೆ ಹಣ ತಿಂದುಹಾಕಿದಾಗ ಅವನಿಂದ ಹೇಗೆ ವಸೂಲು ಮಾಡುವುದು ? 5-6 ಸಾವಿರ ರೂಪಾಯಿ ದುರುಪಯೋಗವಾಗಿರುವಾಗ ಕ್ರಮ ತೆಗೆದುಕೊಳ್ಳಲು ಹಿಂದು ಮುಂದು ನೋಡುವುದೇಕೆ ?

ಶ್ರೀ ಟಿ. ಚನ್ನಯ್ಯ.—ಕರ್ತವ್ಯಲೋಪವಾಗಿರುವಾಗ ಜವಾಬ್ದಾರಿ ಎಷ್ಟು ಮಟ್ಟಗಿದೆಯೆಂಬುದನ್ನು ಇನ್‌ವೆಸ್ಟಿಗೇಟ್ ಮಾಡಿ ಸರ್‌ಛಾರ್ಜ್ ಮಾಡುವುದಕ್ಕೆ ಸರ್ಕಾರವಾಗಲಿ ಅಥವಾ ಡೆಪ್ಯುಟಿ ಕಮಿಷನರಾಗಲಿ ಸೂಕ್ತಕ್ರಮ ಕೈಕೊಳ್ಳಲು ಕಾನೂನಿನಲ್ಲಿ ಅವಕಾಶವಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕೆಲವು ಕಡೆ ಶಿಪಾರ್ಸಿನ ಮೇಲೆ ತಪ್ಪಿತಸ್ಥರನ್ನು ಶಿಕ್ಷಿಸದೆ ಬಿಟ್ಟಿರುವುದು ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ. ಪರಿಶಿಷ್ಟದಲ್ಲಿ ನಮೂದಿಸಿರುವ ಹಾಗೆ ಮಿಸ್‌ಅಪ್ರೊಪ್ರಿಯೇಟ್ ಮಾಡಿದವರನ್ನು ಡಿಸ್‌ಮಿಸ್ ಮಾಡಿದೆ, ಕೆಲವರನ್ನು ರಿವರ್ಟ್ ಮಾಡಿದೆ.

ಶ್ರೀ ಟಿ. ಸಿ. ಬನಪ್ಪ.—ನ್ಯಾಯವಿ, ತಾವು ಇಲ್ಲಿ ಕೊಟ್ಟಿರತಕ್ಕ ಅಪೆಂಡಿಕ್ಸ್‌ನ್ನು ನೋಡಿದರೆ ಬಿಲ್‌ಕಲೆಕ್ಟರ್ಸ್ ನಿಂದಲೇ ಹೆಚ್ಚಾಗಿ ಮಿಸ್‌ಅಪ್ರೊಪ್ರಿಯೇಟ್ ಆಗಿರುವುದು ಕಂಡು ಬರುತ್ತಿದೆ. ಇದರ ಬಗ್ಗೆ ಹೆಚ್ಚಿನ ಸೆಕ್ಯೂರಿಟಿ ಮತ್ತು ಷ್ಯೂರಿಟಿ ತೆಗೆದುಕೊಳ್ಳಬೇಕಾದದ್ದು ಅಗತ್ಯ ಎಂದು ಹೇಳಿ ನೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲಿಕ್ಕೆ ಸಾಧವಿಲ್ಲವೇ ?

Sri T. CHANNIAH.—I think security will be taken from Bill Collectors.

ಶ್ರೀ ಟಿ. ಸಿ. ಬನಪ್ಪ.—ಬಿಲ್‌ಕಲೆಕ್ಟರ್ಸ್‌ರೇ ಹೆಚ್ಚಿನ ಭಾಗ ಮಿಸ್‌ಅಪ್ರೊಪ್ರಿಯೇಟ್ ಮಾಡಿರುವುದರಿಂದ, ಅವರಿಂದ ಇನ್ನು ಹೆಚ್ಚಿನ ಸೆಕ್ಯೂರಿಟಿ, ಷ್ಯೂರಿಟಿ ತೆಗೆದುಕೊಳ್ಳುವುದು ಅಗತ್ಯ ಎಂಬುದು ತಮಗೆ ಗೊತ್ತಾಗುವುದಿಲ್ಲದೇ ?

ಶ್ರೀ ಟಿ. ಚನ್ನಯ್ಯ.—ಈಗ ತೆಗೆದುಕೊಂಡಿರತಕ್ಕ ಸೆಕ್ಯೂರಿಟಿ ಸಾಕು ಎಂದು ಸರ್ಕಾರದವರಿಗೆ ಗೊತ್ತಾಗಿದೆ. ಇನ್ನೂ ಹೆಚ್ಚು ಸೆಕ್ಯೂರಿಟಿ ತೆಗೆದುಕೊಳ್ಳುವುದು ಅವಶ್ಯಕ ಎಂಬುದಾಗಿ ಕಂಡು ಬಂದ ಪಕ್ಷದಲ್ಲಿ ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ. ಸಿ. ಬನಪ್ಪ.—ಈ ಮಿಸ್‌ಅಪ್ರೊಪ್ರಿಯೇಷನ್ ಕೇಸುಗಳ ವಿಚಾರದಲ್ಲಿ ಸರ್ಕಾರದವರಿಗೆ ವರದಿ ಬಂದಿದ್ದರೂ ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಲಿಕ್ಕೆ ಸರ್ಕಾರದವರು ಕೂಡಲೇ ಆರ್ಡರ್ ಮಾಡದೆ ನಿಧಾನಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಇಲ್ಲಿ ಆ ತರಹ ಯಾವ ಕೇಸ್‌ನಲ್ಲೂ ನಿಧಾನವಾಗಿಲ್ಲ.

ಶ್ರೀ ಟಿ. ಸಿ. ಬನಪ್ಪ.—Appendix I (j) ನಲ್ಲಿ 51-52 to 53-54 ರ ವರೆಗೆ 2,552-7-1 ಮಿಸ್ ಅಪ್ರೊಪ್ರಿಯೇಟ್ ಆಗಿದೆ ಎಂದು ಹೇಳಿದ್ದೀರಿ. ಇದರ ಬಗ್ಗೆ 'The Tax Inspector is kept under suspension pending enquiry. The matter is still under detailed enquiry and investigation by the Assistant Revenue officer, East, and his report is awaited" ಎಂದು ಹೇಳಲಾಗಿದೆ. 51-52 ರಿಂದ ಎರಡು ವರ್ಷ ಆದರೂ ಇನ್ನೂ ಇತ್ಯರ್ಥವಾಗಿಲ್ಲ ಎಂದರೆ ಇನ್ನು ಎಷ್ಟು ವರ್ಷಗಳ ಕಾಲಬೇಕು ನ್ಯಾಯವಿ ವಿಚಾರಣೆ ಆಗಲಿಕ್ಕೆ ?

ಶ್ರೀ ಟಿ. ಚನ್ನಯ್ಯ.—ಸರ್ಕಾರದವರಲ್ಲ ಪೆಂಡಿಂಗ್ ಆಗಿಲ್ಲ. ಬಹುಶಃ ಸಂಬಂಧಪಟ್ಟ ಇಲಾಖೆಯಲ್ಲಿ ನಿಧಾನವಾಗಿರಬಹುದು.

ಶ್ರೀ ಟಿ. ಸಿ. ಬನಪ್ಪ.—ಸಂಬಂಧಪಟ್ಟ ಇಲಾಖೆಯಲ್ಲ ಪೆಂಡಿಂಗ್ ಆಗಿದ್ದರೆ ಸರ್ಕಾರದವರು ಕೂಡಲೇ ಆರ್ಡರ್ ಮಾಡಿ, ಕಾರ್ಯಕ್ರಮ ತೆಗೆದುಕೊಂಡು ವರದಿ ತರಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಸರ್ಕಾರದವರ ಇಚ್ಛೆಯು ಜಾಗ್ರತೆ ಆಗಬೇಕೆಂಬುದೇ. ನಿಧಾನಮಾಡಬೇಕೆಂದು ಹೇಳಿ ಯಾವ ಡೈರೆಕ್ಷನ್ನನ್ನೂ ಡಿಪಾರ್ಟ್‌ಮೆಂಟಿಗೆ ಕಳುಹಿಸಿಲ್ಲ. ಬಹುಶಃ ಕೆಲವು ಕಾರಣಗಳಿಂದ ತನಿಖೆ ಮಾಡಲಿಕ್ಕೆ ನಿಧಾನವಾಗಿರಬಹುದು.

ಶ್ರೀ ಟಿ. ಸಿ. ಬನಪ್ಪ.—1951-52 ರಲ್ಲಿ ಮಿಸ್ ಅಪ್ರೊಪ್ರಿಯೇಟ್ ಆಗಿದ್ದಲ್ಲ ಆ ವರ್ಷವೇ ಕೂಡಲೇ ಏಕೆ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ ?

ಶ್ರೀ ಟಿ. ಚನ್ನಯ್ಯ.—ಆಡಿಟ್ ಮಾಡಿದನಂತರ, ಅವರು ಆಡಿಟ್ ರಿಪೋರ್ಟ್ ಕೊಡುತ್ತಾರೆ. ಅನಂತರ ಸಂಬಂಧಪಟ್ಟ ಇಲಾಖೆಯ ಆಫೀಸರಿಗೆ ಅದನ್ನು refer ಮಾಡಿ ಏ ಸ್‌ಅಪ್ರೋಪ್ರಿಯೇಟ್ ಮಾಡಿದವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆ ಸಂದರ್ಭದಲ್ಲಿ ಸ್ವಲ್ಪ ನಿಧಾನವಾಗುತ್ತದೆ. ಆದ್ದರಿಂದ ಆಡಿಟ್ ಜಾಗ್ರತೆ ಆಯಾ ವರ್ಷದಲ್ಲೇ ಕ್ರಮವಾಗಿ ಮಾಡಿ, ಮಿಸ್‌ಅಪ್ರೋಪ್ರಿಯೇಟ್ ಆಗಿದೆ ಎಂಬುದಾಗಿ ಕಂಡು ಬಂದಿದ್ದ ಪಕ್ಷದಲ್ಲಿ ಕೂಡಲೇ ಡಿಪಾರ್ಟ್‌ಮೆಂಟಿನವರಿಗೆ ಅಥವಾ ಸಂಬಂಧಪಟ್ಟ ಅಧಿಕಾರಿಗಳಿಗೆ ಅದನ್ನು ತಿಳಿಸಿ ಜಾಗ್ರತೆ ಕಾರ್ಯಕ್ರಮ ತೆಗೆದುಕೊಳ್ಳಬಹುದಾಗಿತ್ತು. ಆಡಿಟ್ ನಿಧಾನವಾಗಿದ್ದರಿಂದ ಅದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ ಸೂಕ್ತಕ್ರಮ ತೆಗೆದುಕೊಳ್ಳುವುದಕ್ಕೆ ನಿಧಾನವಾಗಿದೆ. ಇದೂ ಒಂದು ಕಾರಣ.

ಶ್ರೀ ಟಿ. ಸಿ. ಬಸಪ್ಪ.—14 ನೇ ಐಟಂನಲ್ಲಿ ಹಿರಿಯೂರು ಮುನಿಸಿಪಲ್ ಮಾಜಿ ಪ್ರೆಸಿಡೆಂಟರು 5,400 ರೂಪಾಯಿಗಳ ಅಡ್ವಾನ್ಸ್ ಡ್ರಾಮಾಡಿದ್ದಾರೆ ಎಂದು ಹೇಳಿದ್ದೀರಿ. ಯಾವಾಗ ಸ್ವಾಮಿ ಅವರು ಆ ಹಣ ಡ್ರಾಮಾಡಿದ್ದು !

ಶ್ರೀ ಟಿ. ಚನ್ನಯ್ಯ.—ಆ ವಿವರ ಕೊಡ ಬೇಕಾಗುವುದಿಲ್ಲ.

ಶ್ರೀ ಟಿ. ಸಿ. ಬಸಪ್ಪ.—ಅವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಟಿ. ಚನ್ನಯ್ಯ.—ಅದನ್ನು ಪರಿಶೀಲನೆ ಮಾಡುತ್ತಾ ಇದ್ದಾರೆ. ಯಾವ ರೀತಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬ ವಿಷಯದಲ್ಲಿ ಡೆಪ್ಯುಟಿ ಕಮಿಷನರಿಂದ ಸರ್ಕಾರದವರಿಗೆ ವರದಿಬಂದಿಲ್ಲ.

ಶ್ರೀ ಟಿ. ಸಿ. ಬಸಪ್ಪ.—ಅವರಿಂದ ವರದಿ ಬರದೇ ಇದ್ದರೆ ಸರ್ಕಾರದವರು ಒತ್ತಾಯ ಮಾಡಿ ಕೂಡಲೇ ಮುನಿಸಿಪಲ್ ಪ್ರೆಸಿಡೆಂಟರವರಿಂದ ಎಕ್ಸ್‌ಪ್ಲನೇಷನ್ ತರಿಸುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಪ್ರತಿಯೊಂದು ಮುನಿಸಿಪಲ್ ಪ್ರೆಸಿಡೆಂಟ್‌ರವರೊಡನೆಯೂ ನೇರವಾಗಿ ಪತ್ರವ್ಯವಹಾರ ನಡೆಸಿ ಕಾರ್ಯಕ್ರಮ ತೆಗೆದುಕೊಳ್ಳುವುದು ಕಾನೂನು ಪ್ರಕಾರ ಸರಿಯಾದದ್ದಲ್ಲ. ಡೆಪ್ಯುಟಿ ಕಮಿಷನರ ಮುಖಾಂತರ ಎರ್.ಎಸ್.ಜಿ. ಕಮಿಷನರಿಗೆ ಬಂದು ಆಮೇಲೆ ಸರ್ಕಾರಕ್ಕೆ ಬರಬೇಕು. ಆ ಪ್ರೊಸೀಜರ್‌ನಂತೆ ಮಾಡಬೇಕೇ ಹೊರತು ಮುನಿಸಿಪಲ್ ಪ್ರೆಸಿಡೆಂಟರಿಗೆ ಬರೆದು ಆ ವಿಷಯದಲ್ಲಿ ಏಕೆ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ ಎಂದು ಕೇಳುವುದು ಸರಿಯಲ್ಲ.

ಶ್ರೀ ಟಿ. ಸಿ. ಬಸಪ್ಪ.—ಡೆಪ್ಯುಟಿ ಕಮಿಷನರಿಗೆ ಯಾವಾಗ ಬರೆದಿದ್ದಾರೆ ? ಅವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ? ಎಂಬುದು ನನ್ನ ನೇರವಾದ ಪ್ರಶ್ನೆ.

Sri T. CHANNIAH.—I cannot give the date now.

ಶ್ರೀ ಡಿ. ಆರ್. ಕರಿಗೌಡ.—11 ನೇ ಐಟಂ (ಬ)ನಲ್ಲಿ ಕೃಷ್ಣಪ್ಪ ಎಂದು ಹೆಸರು ಕೊಟ್ಟಿದ್ದೀರಿ. ಅವರು ಏನು ಕೆಲಸದಲ್ಲಿ ಇದ್ದರು ?

ಶ್ರೀ ಟಿ. ಚನ್ನಯ್ಯ.—ಅಕ್ಕೌಂಟೆಂಟ್ ಮನೇಗಾರ್ ಆಗಿದ್ದರು.

ಶ್ರೀ ಡಿ. ಆರ್. ಕರಿಗೌಡ.—23 ಸಾವಿರ ರೂಪಾಯಿ ತಿಂದು ಎಷ್ಟು ದಿವಸ ಆಗಿದೆ ?

ಶ್ರೀ ಟಿ. ಚನ್ನಯ್ಯ.—1948-49 ರಲ್ಲಿ ಎಂದು ಕಾಣುತ್ತದೆ.

ಶ್ರೀ ಡಿ. ಆರ್. ಕರಿಗೌಡ.—ಆ ಕೇಸು ಖುಲಾಸೆ ಆಗಿದೆ ಎಂದು ಹೇಳಿದ್ದೀರಿ. ಈಗ ಹೇಗೆ ಆ ಹಣವನ್ನು ವಸೂಲುಮಾಡುತ್ತೀರಿ ?

ಶ್ರೀ ಟಿ. ಚನ್ನಯ್ಯ.—ಅವರೇ ಎಂದು ಖಚಿತವಾಗಿ ಹೇಳಲಕ್ಕೆ ಸಾಧ್ಯವಾಗಲಿಲ್ಲ. ಅದಕ್ಕೇ ಸಂಬಂಧಪಟ್ಟ ಅಧಿಕಾರಿಗಳು ಆ ಪೀರಿಯಡ್‌ನಲ್ಲಿ ಯಾರು ಯಾರು ಕೆಲಸಮಾಡಿಕೊಂಡಿದ್ದರು, ಯಾರಾರ ಮೇಲೆ ಜವಾಬ್ದಾರಿ ಎಷ್ಟೆಷ್ಟುಮಟ್ಟಿಗೆ ಇದೆ ಎಂಬುದನ್ನು ನೋಡಿಕೊಂಡು ಸರ್‌ಚಾರ್ಜ್ ಮಾಡತಕ್ಕ ವ್ಯವಸ್ಥೆ ಇದೆ. ಟೌನ್ ಮುನಿಸಿಪಲ್ ಆಕ್ಟ್ ಪ್ರಕಾರ ಡೆಪ್ಯುಟಿ ಕಮಿಷನರಿಗೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಅವಕಾಶ ಇದೆ, ಅವರು ಕ್ರಮ ತೆಗೆದುಕೊಳ್ಳಬೇಕು, ಕ್ರಮ ತೆಗೆದುಕೊಂಡ ಪಕ್ಷದಲ್ಲಿ ಸರ್ಕಾರದವರು ಆ ವಿಷಯದಲ್ಲಿ ಮಂಜೂರಾತಿಯನ್ನು ಕೊಡಬೇಕು.

ಶ್ರೀ ಡಿ. ಆರ್. ಕರಿಗೌಡ.—ಆ ಕಾಲದಲ್ಲಿ ಪ್ರೆಸಿಡೆಂಟರಾಗಿದ್ದವರು ಯಾರು, ಸ್ವಾಮಿ ?

ಅಧ್ಯಕ್ಷರು.—ಅದನ್ನೆಲ್ಲಾ ಹೇಗೆ ಹೇಳುವುದಕ್ಕಾಗುತ್ತದೆ ! ಅದಕ್ಕೆ ಬೇರೆಯಾಗಿ ಒಂದು ಪ್ರಶ್ನೆಯನ್ನೇ ಕೇಳಿದರೆ ವಿವರಗಳನ್ನು ತರಿಸಿ ಹೇಳುತ್ತಾರೆ.

ಶ್ರೀ ಡಿ. ಆರ್. ಕರಿಗೌಡ.—ಯಾರು ಹಣ ತಿಂದಿದ್ದಾರೋ ಅವರನ್ನು ಬಿಟ್ಟು, ತಿನ್ನದೇ ಇರುವವರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದು ಇದರ ಅರ್ಥವೇ ?

ಶ್ರೀ ಟಿ. ಚನ್ನಯ್ಯ.—ಕೋರ್ಟಿನಲ್ಲಿ ಕಾನೂನು ಪ್ರಕಾರ ಮಾಡಿರುತ್ತದೆ. ಯಾರ ಯಾರ ಮೇಲೆ ಎಷ್ಟೆಷ್ಟು ಜವಾಬ್ದಾರಿ ಹಾಕಿ, ಯಾರ ಯಾರಿಂದ ವಸೂಲುಮಾಡಬೇಕೆಂಬುದನ್ನು ಡೆಪ್ಯುಟಿ ಕಮಿಷನರು ಕೂಲಂಕಷವಾಗಿ ಪರಿಶೀಲನೆ ಮಾಡಿ, ಅವರು ಅದರ ಮೇಲೆ ಒಂದು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಡಿ. ಆರ್. ಕರಿಗೌಡ.—ಕೃಷ್ಣಪ್ಪ ಎನ್ನುವವರು ಹಣ ದುರುಪಯೋಗ ಮಾಡಿದರು ಎಂದು ಹೇಳಿ ಕೇಸ್ ಹಾಕಿ ಅವರು ಅಲ್ಲ ಎಂದು ಕೋರ್ಟಿನಲ್ಲಿ ತೀರ್ಮಾನವಾಗುವುದಕ್ಕೆ ಏನಾದರೂ ಎವಿಡೆನ್ಸ್ ಇದೆಯೇ ?

ಶ್ರೀ ಟಿ. ಚನ್ನಯ್ಯ.—ಮಿಸ್ ಅಪ್ರೋಪ್ರಿಯೇಟ್ ಮಾಡಿದ್ದಾರೆ ಎಂದು ಅವರ ಮೇಲೂ ಕೇಸ್ ಹಾಕಿದ್ದರು. ಕೋರ್ಟ್‌ನಲ್ಲಿ ವಿಚಾರಣೆ ಆಗಿ ಅವರನ್ನು acquit ಮಾಡಿದ್ದಾರೆ. ಆದ್ದರಿಂದ ಆ ಪೀರಿಯಡ್‌ನಲ್ಲಿ ಯಾರುಯಾರು ಕೆಲಸ ಮಾಡಿಕೊಂಡಿದ್ದರು, ಯಾರುಯಾರ ಮೇಲೆ ಎಷ್ಟೆಷ್ಟು ಜವಾಬ್ದಾರಿ ಇದೆ ಎಂಬುದನ್ನು ಅಸೆಸ್ ಮಾಡಿ ಯಾವ ರೀತಿ ಸರ್‌ಚಾರ್ಜ್ ಮಾಡಬಹುದು ಎಂಬುದನ್ನು ಡೆಪ್ಯುಟಿ ಕಮಿಷನರು ತೀರ್ಮಾನ ಮಾಡಬೇಕು.

ಶ್ರೀ ಡಿ. ಆರ್. ಕರಿಗೌಡ.—ಹಾಗಾದರೆ ಈ ಕೃಷ್ಣಪ್ಪ ಎನ್ನುವವರ ಹೆಸರು ಕೊಟ್ಟಿರುವುದು ತಪ್ಪು ಅಲ್ಲವೇ ?

ಶ್ರೀ ಟಿ. ಚನ್ನಯ್ಯ.—ಮಿಸ್‌ಅಪ್ರೋಪ್ರಿಯೇಟ್ ಮಾಡುವುದಕ್ಕೆ ಅವರೇ ಮುಖ್ಯ ಕಾರಣರು ಎಂದು ಅವರ ಮೇಲೂ ಕೋರ್ಟ್‌ನಲ್ಲಿ ಕೇಸು ಹಾಕಿದ್ದರು. ಆಮೇಲೆ acquit ಆಗಿದೆ.

Sri J. MOHAMED IMAM.—Who is the officer that is investigating and fixing up the responsibility ?

Sri T. CHANNIAH.—Under section 192 of the Town Municipalities Act, the Deputy Commissioner is quite competent to surcharge or to assess

the amounts that each one has to pay in this behalf.

Sri J. MOHAMED IMAM.—How long is this task of fixing up the responsibility going on? In Chitaldrug that is the biggest amount involved. ಈ responsibility fix up ಮಾಡುವುದನ್ನು ಯಾವ ಅಧಿಕಾರಿಗಳು ಕೈಕೊಂಡಿದ್ದಾರೆ?

ಶ್ರೀ ಟಿ. ಚನ್ನಯ್ಯ.—ಇನ್ನು ಯಾವ ಅಧಿಕಾರಿಗಳ ವಶಕ್ಕೂ ಕೊಟ್ಟಿಲ್ಲ. ಡೆಪ್ಯುಟಿ ಕಮಿಷನರಿಗೆ ಅವಕಾಶ ಇದೆ. 192ನೇ ಸೆಕ್ಷನ್ ಪ್ರಕಾರ ಅವರೇ ಮಾಡ ತಕ್ಕದ್ದು ಎಂದು ಹೇಳಿ ಸರ್ಕಾರದವರು ಅವರಿಗೆ ಒಂದು ಸೂಚನೆ ಕೊಡುತ್ತೇವೆ. ಅದರ ಪ್ರಕಾರ ಅವರು act ಮಾಡಬೇಕು.

ಶ್ರೀ ಜೆ. ಮಹಮ್ಮದ್ ಇಮಾಂ.—ಇನ್ನೂ ಸೂಚನೆ ಕೊಟ್ಟಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಇನ್ನು ಮುಂದೆ ಕೊಡುತ್ತೇವೆ. ಈಗ ತಾನೆ ಆಡಿಟ್ ರಿಪೋರ್ಟ್ ಬಂದಿದೆ. ಅದರ ಮೇರೆ ಸರ್ಕಾರದವರು ಸೂಚನೆ ಕೊಡಬೇಕಾಗಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಈ ಮೊಬಲಗೆಲ್ಲಾ ಏನು ಒಂದೇ ವರ್ಷದಲ್ಲಿ ಮಿಸ್‌ಅಪ್ರೋಪ್ರಿಯೇಟ್ ಆಗಿರುವುದೇ ಅಥವಾ ಅನೇಕ ವರ್ಷಗಳಿಂದಲೂ ಮಿಸ್ ಅಪ್ರೋಪ್ರಿಯೇಟ್ ಆಗುತ್ತಿದ್ದುದೆಲ್ಲಾ ಒಟ್ಟಿಗೆ ಇದರಲ್ಲಿ ಸೇರಿ ಇಷ್ಟಾಗಿದೆಯೋ?

ಶ್ರೀ ಟಿ. ಚನ್ನಯ್ಯ.—ಕಳೆದ ನಾಲ್ಕು ವರ್ಷ ಗಳಿಂದಲೂ ಮಿಸ್ ಅಪ್ರೋಪ್ರಿಯೇಟ್ ಆಗಿರುವುದೆಲ್ಲಾ ಸೇರಿ ಅಷ್ಟಾಗಿದೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಹಾಗಾದರೆ ಅಲ್ಲದ್ದ ಚೀಫ್ ಆಫೀಸರವರು ಅಲ್ಲ ಈ ಕೇನು ಗಳನ್ನೆಲ್ಲಾ ಏಕೆ ಡಿಟೆಕ್ಟ್ ಮಾಡಲಿಲ್ಲ? ಅಥವಾ ಅವರೇನೇ ಇದಕ್ಕೆ ಕಾರಣರೋ?

Sri T. CHANNIAH.—The Deputy Commissioner's detailed report in the matter is awaited by Government. At the moment I am unable to say who is responsible for the misappropriation.

Sri V. M. MASCARENHAS.—Were these gentlemen insured against pilferage, theft and other errors? There is an insurance against people like bill collectors and other employees in the Government and private bodies whereby anything done by them could be made good to the institution concerned. So, did the Government insure these bill collectors and other officials?

Sri T. CHANNIAH.—I will enquire.

Sri V. M. MASCARENHAS.—The interests of the Government will be perfectly safe if they insure all important classes of this type.

Sri R. ANANTARAMAN.—Coming to the appendix under the Corporation of the City of Bangalore, in respect of Bill Collectors mentioned in items (*a*), (*b*) and (*c*), how is it that their services have been only terminated and they are not prosecuted?

Sri T. CHANNIAH.—That is the decision taken by the departmental officers. Perhaps they thought that the punishment imposed is quite enough.

Sri R. ANANTARAMAN.—Is there any resolution passed by the Corporation to terminate their services and not to prosecute them?

Sri T. CHANNIAH.—I think they must have acted according to existing rules and regulations.

Sri R. ANANTARAMAN.—With reference to item (*f*), it is stated that the extent of misappropriation by P. Y. Shivappa is Rs. 4,405-1-1. Does it cover a period of two or three years or is it done within a month?

Sri Kadidal MANJAPPA.—It is difficult to answer supplementaries in regard to all the items mentioned in the Schedule.

Mr. SPEAKER.—From next time, I will have to restrict myself in allowing questions and they must relate only to a single matter.

ಶ್ರೀ ಬಿ. ಚಿಕ್ಕಣ್ಣ.—ಈ ಅರಸೀಕೆರೆ ಮುನಿಸಿಪಾಲಿಟಿ ಯಲ್ಲಿ ದುರುಪಯೋಗವಾಗಿರತಕ್ಕ ಮೊಬಲಗು ಎಷ್ಟು ಎಂಬುದನ್ನು ತಿಳಿಸುವುದಕ್ಕೆ ಆ ಮೊಬಲಗು ಇನ್ನೂ ನಿರ್ದಿಷ್ಟವಾಗಿಲ್ಲ ಎಂದು ಹೇಳಿದ್ದೀರಿ. ಈಗಾಗಲೆ ಎರಡು ವರ್ಷಗಳ ಮೇಲಾಗಿದೆ. ಆ ಮೊಬಲಗು ಇಷ್ಟೇ ಎಂದು ತಿಳಿಸುವುದಕ್ಕೆ ತಮಗೆ ಇನ್ನೂ ಎಷ್ಟು ವರ್ಷಗಳು ಬೇಕಾಗಬಹುದು?

ಶ್ರೀ ಟಿ. ಚನ್ನಯ್ಯ.—ವರ್ಷಗಳೇನೂ ಬೇಕಾಗಿಲ್ಲ. L.S.G. ಕಮಿಷನರಿಗೆ ಜಾಗ್ರತೆ ಆ ಮೊಬಲಗೆಲ್ಲಾ ಎಷ್ಟಾಗುತ್ತದೆ ಎಂಬುದನ್ನು ಕಂಡುಹಿಡಿದು ಸರ್ಕಾರಕ್ಕೆ ಆ ಬಗ್ಗೆ ಜಾಗ್ರತೆ ವರದಿಯನ್ನು ಕಳುಹಿಸ ಬೇಕೆಂದು ಹೇಳಲಾಗಿದೆ. ಈ ಬಗ್ಗೆ ನಾವು ಜಾಗ್ರತೆ ಯಾಗಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆ.

ಶ್ರೀ ಬಿ. ಚಿಕ್ಕಣ್ಣ.—ಹಣ ದುರುಪಯೋಗ ಮಾಡಿರ ತಕ್ಕಂಥ ಆ ಬಿಲ್ ಕಲೆಕ್ಟರು ಈಗ ನಮ್ಮ ಸ್ಟೇಟಿನಲ್ಲೇ ಇಲ್ಲ ಎನ್ನುವುದು ತಮಗೆ ಗೊತ್ತಿದೆಯೇ?

ಶ್ರೀ ಟಿ. ಚನ್ನಯ್ಯ.—ಗೊತ್ತಿಲ್ಲ.

ಶ್ರೀ ಬಿ. ಚಿಕ್ಕಣ್ಣ.—ಹಾಗೆ ಹಣ ದುರುಪಯೋಗ ಮಾಡಿರತಕ್ಕಂಥ ಮನುಷ್ಯ ನಮ್ಮ ಸ್ಟೇಟಿನಲ್ಲೇ ಇಲ್ಲ ದಿರುವಾಗ ತಾವು ಆ ಹಣವನ್ನು ಯಾವ ರೀತಿ ವಸೂಲ್ಮಾಡುತ್ತೀರಿ?

ಶ್ರೀ ಟಿ. ಚನ್ನಯ್ಯ.—ಕಾನೂನು ಪ್ರಕಾರ ಏನೇನು ಮಾಡಬೇಕೋ ಅದೆಲ್ಲವನ್ನೂ ಮಾಡಲಾಗುತ್ತದೆ. ಅದೆಲ್ಲವನ್ನೂ ಆಲೋಚನೆ ಮಾಡಲಾಗುತ್ತದೆ.

ಶ್ರೀ ಬಿ. ನಾರಾಯಣಸ್ವಾಮಿ.—ತಾವು ಈಗ ಆ ಮೈನೂರು ಸಿಟಿ ಮುನಿಸಿಪಾಲಿಟಿಯಲ್ಲಿ ದುರು ಪಯೋಗವಾಗಿರತಕ್ಕ ಹಣ ಎಷ್ಟೆಂದು ಕೇಳಿರು ವುದಕ್ಕೆ (*a*) 1,276 ರೂಪಾಯಿ 7 ಆಣೆ 9 ಕಾನು; (*b*) 565 ರೂಪಾಯಿ 10 ಆಣೆ 2 ಕಾನು;

(ಶ್ರೀ ಬಿ. ನಾರಾಯಣಸ್ವಾಮಿ.)

(*c*) 655 ರೂಪಾಯಿ 1 ಆಣೆ 10 ಕಾಸು; (*d*) 766 ರೂಪಾಯಿ 0 ಆಣೆ 6 ಕಾಸು; (*e*) 115 ರೂಪಾಯಿ 11 ಆಣೆ 9 ಕಾಸು ಎಂದು ಹೇಳಿದ್ದೀರಿ. ಈ ಹಣ ಎಲ್ಲಾ ಈಗ ವಸೂಲಾಗಿದೆಯೇ ಅಥವಾ ಇನ್ನೂ ಇಲ್ಲವೇ?

ಶ್ರೀ ಟಿ. ಚನ್ನಯ್ಯ.—'Action taken' ಎನ್ನುವ ಕಾಲಂ ನೋಡಿ. ಅದರಲ್ಲಿ ವಿವರಗಳನ್ನೆಲ್ಲಾ ತಿಳಿಸಿದೆ. ಆದರೆ ಬಹುಶಃ ಹಣವನ್ನು ಇನ್ನೂ ವಸೂಲ್ಮಾಡಿಲ್ಲವೆಂದು ಕಾಣುತ್ತದೆ.

ಶ್ರೀ ಜಿ. ಬಸಪ್ಪ.—ಈ ಮಿಸ್‌ಅಪ್ರೊಪ್ರಿಯೇಷನ್ ಎಂದರೆ ಈ ನೇಚರ್ ಆಫ್ ಅಫೆನ್ಸ್‌ಗಳೆಲ್ಲಾ ಒಂದೇ ಅಲ್ಲವೇ! ಏತಕ್ಕಾಗಿ ಈ ಪ್ರಶ್ನೆಯನ್ನು ನಾನೀಗ ಕೇಳುತ್ತಿದ್ದೇನೆಂದರೆ, ಕೆಲವು ಸಂದರ್ಭಗಳಲ್ಲಿ ಹಣ ದುರುಪಯೋಗವಾಗಿರತಕ್ಕ ಬಗ್ಗೆ ಕೆಲವರನ್ನು ಪುನಃ ಕೆಲಸಕ್ಕೆ ತೆಗೆದುಕೊಂಡಿದ್ದಾರೆ; ಕೆಲವರನ್ನು ಕೆಳ ದರ್ಜೆಗೆ ಇಳಿಸಿದ್ದಾರೆ ಮತ್ತೆ ಕೆಲವರನ್ನು ಸಸ್ಪೆಂಡ್ ಮಾಡಿದ್ದಾರೆ; ಇನ್ನು ಕೆಲವರನ್ನು ಕೆಲಸದಿಂದಲೇ ತೆಗೆದುಹಾಕಿದ್ದಾರೆ. ಹೀಗೆಲ್ಲಾ ಮಾಡಲು ಕಾರಣ ವೇನು?

ಶ್ರೀ ಟಿ. ಚನ್ನಯ್ಯ.—ಈ ವಿಚಾರ question of degree ಮೇಲೆ ವ್ಯತ್ಯಾಸಹೊಂದತಕ್ಕಂಥದ್ದಾಗಿದೆ; ಮತ್ತು ಅವರು ಎಷ್ಟೆಷ್ಟು ಹಣ ದುರುಪಯೋಗ ಮಾಡಿದ್ದಾರೆ ಎನ್ನುವುದರ ಮೇಲೂ ಹೋಗುತ್ತದೆ.

ಶ್ರೀ ಜಿ. ಬಸಪ್ಪ.—ಹಾಗಾದರೆ ಜಾಸ್ತಿ ಮೊಬಲಗನ್ನು ದುರುಪಯೋಗ ಮಾಡಿರತಕ್ಕವರಿಗೆ ಕಮ್ಮಿ ಶಿಕ್ಷೆ ಮಾಡಿ, ಕಮ್ಮಿ ಮೊಬಲಗನ್ನು ದುರುಪಯೋಗಮಾಡಿರತಕ್ಕವರಿಗೆ ಜಾಸ್ತಿ ಶಿಕ್ಷೆಯನ್ನು ಕೊಡಲಾಗಿದೆ. ಈ ವ್ಯತ್ಯಾಸಗಳಿಗೆ ಕಾರಣವೇನು?

Sri T. CHANNIAH.—It is not only a question of amount involved. If the offence is committed by sheer negligence or carelessness, or under circumstances over which he had no control or under pressure or influence of somebody, that person may not commit such offence for a second time.

ಹೀಗೆ ಕೆಲವು ಫಸ್ಟ್ ಇನ್‌ಸ್ಟೆನ್ಸ್‌ನಲ್ಲಿ ಆಗಿರತಕ್ಕಂಥ ಕೇಸುಗಳಾಗಿದ್ದರೆ ಮೊಬಲಗು ಕೊಂಚ ಹೆಚ್ಚಾಗಿದ್ದರೂ ಅವರಿಗೊಂದು ಲೀನಿಯೆನ್ಸಿಯನ್ನು ತೋರಿಸಲಾಗುತ್ತದೆ. ಆದರೆ ಯಾವಾಗಲೂ ಹೀಗೆ ಮಿಸಪ್ರೊಪ್ರಿಯೇಟ್ ಮಾಡತಕ್ಕಂಥವರ ವಿಚಾರದಲ್ಲಿ ಮೊಬಲಗು ಕಡಮೆಯಾಗಿದ್ದರೂ ಲೀನಿಯೆನ್ಸಿಯನ್ನು ತೋರಿಸುವುದಕ್ಕಾಗುವುದಿಲ್ಲ.

ಶ್ರೀ ಜಿ. ಬಸಪ್ಪ.—ತಾವು ಈ ಸಂದರ್ಭಗಳಲ್ಲಿ ಯಾವುದಾದರೂ ಇನ್‌ಫ್ಲುಯೆನ್ಸುಗಳಿಗೆ ಒಳಗಾಗಿ ಹೀಗೆ ಲೀನಿಯೆಂಟಾಗಿ ಆಕ್ಷನ್ ತೆಗೆದುಕೊಳ್ಳಲಾಗಿದೆಯೇ?

ಶ್ರೀ ಟಿ. ಚನ್ನಯ್ಯ.—ಅದು ಸರ್ಕಾರದವರು ಮಾಡತಕ್ಕಂಥ ಕೆಲಸವಲ್ಲ. ಅದು ಇಲಾಖೆಯವರ ಜವಾಬ್ದಾರಿ.

ಶ್ರೀ ವಿ. ಆರ್. ನಾಯ್ಡು.—ಇವರೆಲ್ಲರಿಗೂ ಎಷ್ಟೆಷ್ಟು ವರ್ಷ ಸರ್ವೀಸ್ ಆಗಿದೆ? ಇವರನ್ನು ತಾವು ಕೆಲಸದಿಂದ ತೆಗೆದುಹಾಕಿದ ನಂತರ ತಾವು ಇವರ ಹೆಂಡತಿ ಮಕ್ಕಳಿಗೆ ಏನಾದರೂ ಪರಿಹಾರ ಕೊಟ್ಟಿದ್ದೀರಾ?

ಅಧ್ಯಕ್ಷರು.—ಆ ಪ್ರಶ್ನೆ ಈಗ ಉದ್ಭವಿಸುವುದಿಲ್ಲ.

ಶ್ರೀ ಡಿ. ದೇವರಾಜಅರಸ್.—ಸ್ವಾಮಿ, ತಾವು ಈ ಮೈನೂರು ಸಿಟಿ ಮುನಿಸಿಪಾಲಿಟಿಯಲ್ಲಿ (ಎ) ಐಟಂನಲ್ಲಿ ನೂಚಿಸಿರುವ ಪ್ರಕಾರ ರೂಪಾಯಿ 1,276-7-9 ಗಳನ್ನು ಮಿಸಪ್ರೊಪ್ರಿಯೇಟ್ ಮಾಡಿರತಕ್ಕಂಥ ನೌಕರನನ್ನು ತಿಂಗಳೊಂದಕ್ಕೆ 30 ರೂಪಾಯಿಗಳ ಸಂಬಳದ ಮೇಲೆ ಬಿಲ್ ಕಲೆಕ್ಟರನ್ನಾಗಿ ಕೆಳಗಿನ ದರ್ಜೆಗೆ ಹಾಕಲಾಗಿದೆಯೆಂದು ತಿಳಿಸಿದ್ದೀರಿ. ಅದೇ ಕಾಲಂನ ಕೊನೆಯ ಭಾಗದಲ್ಲಿ (ಇ) ಐಟಂನಲ್ಲಿ ರೂಪಾಯಿ 115-11-9 ಗಳನ್ನು ಮಿಸಪ್ರೊಪ್ರಿಯೇಟ್ ಮಾಡಿರತಕ್ಕ ನೌಕರನನ್ನು ಕೆಲಸದಿಂದಲೇ ತೆಗೆದುಹಾಕಲಾಗಿದೆ ಎಂದು ಹೇಳಿದ್ದೀರಿ. ಆದರೆ ಈ ಶಿಕ್ಷೆಗಳನ್ನು ಕೊಡತಕ್ಕ ಬಗ್ಗೆ ಈಗತಾನೆ ಮಾನ್ಯಮಂತ್ರಿಗಳು ಉತ್ತರ ಕೊಡುತ್ತ it is a question of degree and the amount of money misappropriated ಎಂದು ಹೇಳಿದರು. ಆದರೆ ಹೀಗೆ ಕೇವಲ 115 ರೂಪಾಯಿಗಳನ್ನು ಮಿಸಪ್ರೊಪ್ರಿಯೇಟ್ ಮಾಡಿದವನನ್ನು ಡಿಸ್‌ಮಿಸ್ ಮಾಡುವುದು; 1,276 ರೂಪಾಯಿಗಳನ್ನು ತಿಂದುಹಾಕಿದವನಿಗೆ ಬರಿ ಒಂದು ರಿಡಕ್ಷನ್ ಮಾಡುವುದು; ಇದು ಯಾವ ಆಧಾರ ಮೇಲೆ, ಸ್ವಾಮಿ?

ಶ್ರೀ ಟಿ. ಚನ್ನಯ್ಯ.—ನಾನಾಗಲೇ ತಿಳಿಸಿದಹಾಗೆ, not only the amount that is involved, but some other considerations will be taken into consideration.

Sri D. DEVARAJ URS.—Shall I take it that this reduction of pay or dismissal depended on the kind of influence that a particular person concerned was able to command?

Sri T. CHANNIAH.—I do not know if such things do happen in municipalities.

Sri D. DEVARAJ URS.—I am asking for information on that point. What is the basis on which several of these persons were dealt with so far as giving of punishment is concerned? I want to know the basis on which they were done.

Mr. SPEAKER.—It is stated already, in answer to more than one question, that due to so many reasons, various kinds of punishments were inflicted, and they were not uniform.

Sri D. DEVARAJ URS.—The point is, one contradicts the other here. . . .

Mr. SPEAKER.—There cannot be any discussion. They have stated already that it is due to so many circumstances. There may be extenuating circumstances. The Government admit that there may be even influences in the municipalities. Therefore, there is no use of further discussion. The Hon'ble Member may take other opportunities for the purpose. Next question.